ರಾಜ್ಯದಲ್ಲಿ ಸರ್ಕಾರಿ ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಅಗತ್ಯ ಇರುವ ಅದ್ಯಾಪಕರ ಸಂಖ್ಯೆ (ಜಿಲ್ಲಾವಾರು ವಿವರ) ಈ ಕೆಳಕಂಡಂತಿದೆ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು		ಅಗತ್ಯ ಇರುವ ಶಿಕ್ಷಕರ ಸಂಖ್ಯೆ
೧)	ಚಿಕ್ಕಮಗಳೂರು		೨೬೦
೨)	ದಕ್ಷಿಣ ಕನ್ನಡ ಜಿಲ್ಲೆ		೩೪೧
೩)	ಮೈಸೂರು		೪೯೭
೪)	ಬೆಳಗಾವಿ		೩೪೯
೫)	ವಿಜಾಪುರ		೪೭೬
೬)	ಗುಲ್ಬರ್ಗಾ		೬೯೫
೭)	ಉತ್ತರ ಕನ್ನಡ ಜಿಲ್ಲೆ		೯೬
೮)	ಬೀದರ್		೨೪೧
೯)	ಧಾರವಾಡ		೭೪೦
೧೦)	ಬಳ್ಳಾರಿ		೫೯೯
೧೧)	ಹಾಸನ		೩೦೬
೧೨)	ರಾಯಚೂರು		೮೯೬
೧೩)	ಚಿತ್ರದುರ್ಗ		೨೩೬
೧೪)	ಶಿವಮೊಗ್ಗ		೪೯೦
೧೫)	ತುಮಕೂರು		೭೪೨
೧೬)	ಬೆಂಗಳೂರು ಗ್ರಾಮಾಂತರ		೬೧೦
೧೭)	ಮಂಡ್ಯ		೯೭
೧೮)	ಕೋಲಾರ		೩೨೦
೧೯)	ಕೊಡಗು	ಬೇಕಿಲ್ಲ	
೨೦)	ಬೆಂಗಳೂರು ಉತ್ತರ	,,	
೨೧)	ಬೆಂಗಳೂರು ದಕ್ಷಿಣ	,,	
		ಒಟ್ಟು	೮೦೦೦

ಸಮುದ್ರ ಕೊರೆತವನ್ನು ತಡೆಗಟ್ಟುವ ಬಗ್ಗೆ.

೬೬೧ ೧೭೬೪ ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).— ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಸಮುದ್ರ ಕೊರೆತವನ್ನು ತಡೆಗಟ್ಟಲು ಕೇಂದ್ರ ಸರಕಾರದವರು ಧನ ಸಹಾಯ ಮಾಡಿದ್ದಾರೆಯೇ?

ಆ) ಹಾಗಿದ್ದಲ್ಲಿ, ಆ ಹಣವನ್ನು ಸಂಪೂರ್ಣವಾಗಿ ಖರ್ಚು ಮಾಡಲಾಗಿದೆಯೇ?

ಇ) ಸಮುದ್ರ ಕೊರೆತವನ್ನು ಶಾಶ್ವತವಾಗಿ ತಡೆಯಲು ಸರ್ಕಾರದವರು ಕೈಗೊಂಡಿರುವ ಕ್ರಮವೇನು?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಇಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಸಮುದ್ರ ಕೊರೆತವನ್ನು ಶಾಶ್ವತವಾಗಿ ತಡೆಯಲು ೧೫೦ ಕೋಟಿ ರೂ.ಗಳ ಮಾಸ್ಟರ್ ಯೋಜನೆಯನ್ನು ತಯಾರಿಸಿ ಕೇಂದ್ರ ಸರ್ಕಾರದ ನೆರವನ್ನು ಕೋರಲಾಗಿದ್ದು, ಇದುವರೆಗೂ ಯಾವುದೇ ನೆರವು ದೊರೆತಿರುವುದಿಲ್ಲ. ಆದಾಗ್ಯೂ, ರಾಜ್ಯ ಸರ್ಕಾರವು ತನ್ನ ಸಂಪನ್ಮೂಲದಲ್ಲಿಯೇ ಆದ್ಯತೆಯ ಸ್ಥಳಗಳಲ್ಲಿ ಶಾಶ್ವತ ತಡೆಗೋಡೆಗಳ ನಿರ್ಮಾಣ ಕೆಲಸವನ್ನು ಕೈಗೊಂಡಿರುತ್ತದೆ.

ಪ್ರಾಥಮಿಕ ಜಾತಿಯ ಶಿಕ್ಷಕರನ್ನು ನೇಮಕ ಮಾಡುವ ಬಗ್ಗೆ

೧೭೦೮ ಶ್ರೀ ಪಿ.ಸಿ. ಮುನಿಸ್ವಾಮಯ್ಯ (ದೇವನಹಳ್ಳಿ) -- ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಾಥಮಿಕ ಶಾಲೆಯ ಶಿಕ್ಷಕರನ್ನು ನೇಮಿಸುವಾಗ ಹರಿಜನ ಅಭ್ಯರ್ಥಿಗಳಿಗೆ ಉಪಾಧ್ಯಾಯರ ತರಬೇತಿ ಪಡೆದಿರಬೇಕೆಂದು ಕಡ್ಡಾಯ ಮಾಡದೆ ಅವರುಗಳನ್ನು ನೇಮಕ ಮಾಡಿಕೊಂಡ ಮೇಲೆ ತರಬೇತಿ ಕೊಡುವುದು ಸರ್ಕಾರದ ಪರಿಶೀಲನೆಯಲ್ಲಿ ಇದೆಯೇ?

ಆ) ಹಾಗಿದ್ದಲ್ಲಿ ಅದರ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು)

ಅ) ಇಲ್ಲ

ಆ) ಪ್ರಶ್ನೆ (ಆ)ಗೆ ಕೊಟ್ಟಿರುವ ಉತ್ತರದಿಂದ ಉದ್ಭವಿಸುವುದಿಲ್ಲ.

ಚಿಕ್ಕಬೂದನೂರ ಚಿಕ್ಕ ನೀರಾವರಿ ಕೆಲಸ ಪ್ರಾರಂಭಿಸುವ ಬಗ್ಗೆ

೮೦೧ ಶ್ರೀ ಶಿವಾನಂದ ಹೆಚ್ ಕೌಲಜಗಿ (ಬೈಲ ಹೊಂಗಲ).—ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳಗಾಂವ ಜಿಲ್ಲೆಯ ಸವದತ್ತಿ ತಾಲ್ಲೂಕಿನ ''ಚಿಕ್ಕಬೂದನೂರ'' ಸಣ್ಣ ನೀರಾವರಿ ಕೆರೆಯನ್ನು ನಿರ್ಮಿಸುವ ಕೆಲಸವನ್ನು ೧೯೮೬-೮೭ನೇ ಆಯವ್ಯಯ ಪಟ್ಟಿಯಲ್ಲಿ ಸೇರಿಸಿದ್ದರೂ ಕೂಡ ಅದು ಇಲ್ಲಿಯವರೆಗೆ ಪ್ರಾರಂಭವಾಗಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಸರ್ಕಾರದವರು ಆ ಕೆಲಸವನ್ನು ಯಾವಾಗ ಪ್ರಾರಂಭಿಸುವರು ?

ಇ) ಈ ಯೋಜನೆಗೆ ಎಷ್ಟು ಹಣ ಒದಗಿಸಲಾಗಿದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು)

ಅ) ಹೌದು

ಆ) ಅಂದಾಜಿಗೆ ಮಂಜೂರಾತಿಯಾದ ನಂತರ, ಕ್ರಮ ತೆಗೆದುಕೊಳ್ಳಲಾಗುವುದು.

ಇ) ೧.೮೦ ಲಕ್ಷ ರೂಪಾಯಿಗಳು.

ಮಹದಾಯಿ ನದಿಯ ನೀರನ್ನು ಮಲಪ್ರಭ ನದಿಗೆ ಕೂಡಿಸುವ ಬಗ್ಗೆ

೧೯೧೩ ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲ ಹೊಂಗಲ) ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳಗಾವಿ ಜಿಲ್ಲೆಯಲ್ಲಿ ಇರುವ ಮಹಾದಾಯಿ ನದಿಯ ನೀರನ್ನು ಮಲಪ್ರಭಾ ನದಿಗೆ ಕೂಡಿಸುವ ವಿಚಾರ ಸರ್ಕಾರದವರ ಮುಂದೆ ಇದೆಯೇ ? ಮತ್ತು ಅದು ಯಾವ ಹಂತದಲ್ಲಿ ಇದೆ ?